**58 ನೇ ಅಪರ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ**
**ಸಿಸಿಹೆಚ್-59**
**ಎಸ್.ಸಿ.ನಂ. 1271/2022**

ಪಿ.ಡಬ್ಲ್ಯೂ. 3
ಸಿ.ಡಬ್ಲ್ಯೂ. 2
ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕಃ 13.11.2025

| | |
|---|---|
| **ಸಾಕ್ಷಿಯ ಹೆಸರು** | ರಾಜುಮರಿ ಹೆಗಡೆ |
| **ತಂದೆಯ ಹೆಸರು** | ಮರಿಹೆಗಡೆ |
| **ವಯಸ್ಸು** | 45 ವರ್ಷ |
| **ವೃತ್ತಿ** | ಜೇರಾಕ್ಸ ಅಂಗಡಿ |
| **ವಾಸ ಸ್ಥಳ** | ಕಟ್ಟೇನಹಳ್ಳಿ, ಯಲಹಂಕ, ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಪ್ರಾಜ್ಞ ಪಿಪಿ ರವರಿಂದಃ**

ಚಾ.ಸಾ.1 ನನ್ನ ಹೆಂಡತಿ. ಚಾ.ಸಾ.3 ನನ್ನ ತಂಗಿ. ನಾನು ಜೇರಾಕ್ಸ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೇನೆ. 2018-19 ರಲ್ಲಿ ನಾನು ದಿನಸಿ ಅಂಗಡಿಯನ್ನು ಮನೆಯ ಪಕ್ಕದಲ್ಲಿ ಅಂದರೆ ಕಟ್ಟೇನಹಳ್ಳಿಯಲ್ಲಿ ನಡೆಸುತ್ತಿದ್ದೆ. ನಾನು ಹುಟ್ಟಿದ 9 ತಿಂಗಳಲ್ಲಿ ನನಗೆ ಪೋಲಿಯೋ ಆಗಿ ವಿಶೇಷ ಚೇತನನಾಗಿರುತ್ತೇನೆ. ಮನೆಯಲ್ಲಿ ನಮ್ಮ ತಂದೆ, ತಾಯಿ, ನಾವು ನಾಲ್ಕು ಜನ ಸಹೋದರರು ಮತ್ತು ಸಹೋದರಿ ಇದ್ದೆವು. ಚಾ.ಸಾ.3 ನನ್ನ ಸಹೋದರಿ.

2013 ರಲ್ಲಿ ನನಗೆ ಮತ್ತು ಚಾ.ಸಾ.1 ರವರ ಮದುವೆಯಾಗಿತ್ತು. ಚಾ.ಸಾ.1 ರವರು ಹುಟ್ಟೂರು ದೇವದುರ್ಗದವರು, ಆದರೆ ಅವರು ಬೆಳೆದು ಮತ್ತು ವಾಸ ಇದಿದ್ದು ಬೆಂಗಳೂರಿನಲ್ಲಿ. ನನ್ನ ಹೆಂಡತಿ ಸಹ ವಿಶೇಷ ಚೇತನದವರು.

2014 ರಲ್ಲಿ ನಿವೇಶನ ಖರೀದಿ ಮಾಡುವಂತೆ ನಿರ್ದಾರ ಮಾಡಿ ಮಧ್ಯವರ್ಡಿತಿಯವರು ಮೂಲಕ ನೋಡುತ್ತಿದ್ದೆವು. ಆಗ ಮಧ್ಯವರ್ತಿಗಳ ಮೂಲಕ

ನಾಗಶೆಟ್ಟಿ ಹಳ್ಳಿ ಗ್ರಾಮದ ಸರ್ವೆ ನಂ.73/3 ಮತ್ತು 73/4 ರಲ್ಲಿ ಲೇಔಟ್ ಆಗಿ ನಿವೇಶನಗಳಾಗಿ ಮಾಡಿದ ಪೈಕಿ ಸೈಟ್ ನಂ. 61 ನೇ ನಿವೇಶನವನ್ನು ನೋಡಿ ಖರೀದಿಸಬೇಕು ಎಂದು ಇಚ್ಛಿಸಿದೆವು. ಸದರಿ ಲೇಔಟ್‌ಗೆ ಎಇಸಿಎಸ್ ಲೇಔಟ್ ಎಂದು ಕರೆಯುತ್ತಾರೆ. ನಮ್ಮ ಕುಟುಂಬದಲ್ಲಿ ಮಾತುಕತೆಯಾಗಿ ಚಾ.ಸಾ.3 ಒಬ್ಬಳೇ ಮಗಳಾದ ಕಾರಣ ಆಕೆಯ ಹೆಸರಿನಲ್ಲಿ ನಿವೇಶನವನ್ನು ಖರೀದಿಸಲು ನಿರ್ಧರಿಸಿದೆವು. ಸದರಿ ನಿವೇಶನ ಖರೀದಿಸಲು ಪ್ರತಿಫಲ 45 ಲಕ್ಷ ಎಂದು ನಿರ್ಧರಿಸಲಾಯಿತು. ಸದರಿ ನಿವೇಶನದ ಮಾಲೀಕರು ಖುಷದಿನೇಶ್ ಪಟೇಲ್‌ರಾಗಿದ್ದು ನಾಗರಾಜು ಎಂಬುವವರು ಅವರಿಂದ ಅಧಿಕಾರಪತ್ರವನ್ನು ಪಡೆದಿದ್ದರು. ಸದರಿ ನಿವೇಶನವನ್ನು ನಾವು ನಾಗರಾಜುರವರ ಮೂಲಕ ಖರೀದಿ ಮಾಡಿದ್ದೇವೆ.

ನಿವೇಶನಕ್ಕೆ ನಾವು 15 ಲಕ್ಷವನ್ನು ಮುಂಗಡ ಹಣವಾಗಿ ಕೊಟ್ಟಿದ್ದು ಇನ್ನು ಉಳಿದ ಪ್ರತಿಫಲ ಬಾಬ್ತನ್ನು ನಗದು ರೂಪದಲ್ಲಿ ಪಾವತಿ ಮಾಡಿದ್ದೇವೆ. ಉಳಿದ 30 ಲಕ್ಷ ಹಣವನ್ನು ನಮ್ಮ ಕುಟುಂಬದವರ ವೈಯಕ್ತಿಕವಾಗಿ ಉಳಿಸಿದ ಹಣವನ್ನು ಮತ್ತು ಕೈಸಾಲದ ಹಣದಿಂದ ಪಾವತಿ ಮಾಡಿದ್ದೇವೆ. ಪತ್ರವನ್ನು ವಕೀಲರಿಗೆ ತೋರಿಸಿ ಓದಿ ನೋಡಿ ನಂತರ ನೊಂದಣಿ ಸಹ ಮಾಡಿಕೊಂಡಿದ್ದೇವೆ. ದಿಃ27.11.2014 ರಂದು ಚಾ.ಸಾ.3 ರವರ ಹೆಸರಿಗೆ ಸದರಿ ನಿವೇಶನವನ್ನು ನೊಂದಣಿ ಕ್ರಯಪತ್ರದ ಮೂಲದ ಖರೀದಿ ಮಾಡಲಾಗಿತ್ತು. ಕಾಗದ ಪತ್ರವನ್ನು ಗಾಂಧಿನಗರದ ಉಪನೊಂದಣಾಧಿಕಾರಿಯ ಕಛೇರಿಯಲ್ಲಿ ನೊಂದಣಿ ಮಾಡಲಾಗಿತ್ತು.

ಡಿಸೆಂಬರ್ 2015 ರಲ್ಲಿ ಚಾ.ಸಾ.3 ರವರು ಮದುವೆ ನಿಶ್ಚಯವಾಗಿದ್ದು, ನಂತರ 19.02.2016 ರಲ್ಲಿ ಚಾ.ಸಾ.3 ರವರ ಮದುವೆ ಮಾಡಲಾಗಿತ್ತು.

2017 ರಲ್ಲಿ ನನ್ನ ತಮ್ಮನ ಮದುವೆಯಾಯಿತು. ಚಾ.ಸಾ.3 ರವರು ಮದುವೆಯಾದ ನಂತರ ಅವರ ಗಂಡನ ಸಹಮಡಿಯೊಂದಿಗೆ, ದಿಃ29.02.2016 ರಂದು ಚಾ.ಸಾ.3 ರವರು ಸದರಿ ನಿವೇಶನವನ್ನು ನನ್ನ ಹೆಸರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ. ದಿಃ22.03.2016 ರಂದು ನಾನು ಚಾ.ಸಾ.1 ರವರ ಹೆಸರಿಗೆ ದಾನಪತ್ರದ ಬರೆದುಕೊಟ್ಟಿರುತ್ತೇನೆ. ದಾನಪತ್ರದ ಆಧಾರದ ಮೇಲೆ ನಿವೇಶನಕ್ಕೆ ಸಂಬಂದಿಸಿದಂತೆ ಖಾತೆ ಮತ್ತು ಇತರೆ ದಾಖಲೆಗಳು ಚಾ.ಸಾ.1 ರವರ ಹೆಸರಿಗೆ ಬದಲಾವಣೆಯಾಗಿದೆ.

ನನ್ನ ತಂಗಿ ಮತ್ತು ತಮ್ಮನ ಮದುವೆ ಖರ್ಚು ಮತ್ತು ಸಾಲ ಎಲ್ಲವೂ ತುಂಬಾ ಹೊರೆಯಾಗಿದ್ದು ಮತ್ತು ಅಷ್ಟು ಆದಾಯ ಕುಟುಂಬಕ್ಕೆ ಇರದ ಕಾರಣ ನಿವೇಶನವನ್ನು ಮಾರಾಟ ಮಾಡಲು ನಿರ್ಧಾರ ಮಾಡಿ ವೈಯಾಲಿ ಕಾವಲ್ ಹತ್ತಿರ ಮೆಡಿಕಲ್ ಸ್ಟೋರ್ ನಡೆಸುತ್ತಿದ್ದ ಕೇಶವ ಮೂರ್ತಿರವರಿಗೆ ತಿಳಿಸಿದೆವು. ಅದರಂತೆ ಸದರಿ ಕೇಶವ ಮೂರ್ತಿಯವರು ನಿವೇಶನಕ್ಕೆ ಸಂಬಂದಿಸಿ ಎಲ್ಲಾ ದಾಖಲೆಗಳನ್ನು ಪಡೆದುಕೊಂಡಿದ್ದರು. ಆಗ ನಿವೇಶನದ ಬೆಲೆ ಚದುರಡಿಗೆ 8 ರಿಂದ 9 ಸಾವಿರ ರೂಗಳು ಇದ್ದವು. ಕೇಶವ ಮೂರ್ತಿಗೆ 3 ಕೋಟಿಗೆ ಕ್ರಯ ಮಾಡಿಸಿಕೊಡಿ ಎಂದು ಕೇಳಿದ್ದು ಅದಕ್ಕೆ ಕೇಶವ ಮೂರ್ತಿರವರು ಜಿಪಿಎ ಮೂಲಕ ಪಡೆದುಕೊಂಡಿದ್ದೀರಿ ಎಂದು ತಿಳಿಸಿದರು.

ಅದರಂತೆ ಕೇಶವ ಮೂರ್ತಿಯವರು 1 ರಿಂದ 3 ನೇ ಆರೋಪಿಗಳನ್ನು ತಂದು ನಮಗೆ ಪರಿಚಯಿಸಿದರು. ಆರೋಪಿಗಳು ನಾನು ಜಿಪಿಎ ಮೂಲಕ ನಿವೇಶನವನ್ನು ಖರೀದಿಸಿದ ಕಾರಣ ಕಾನೂನಿನಲ್ಲಿ ತೊಡಕುಗಳು ಇದ್ದು 3 ಕೋಟಿ ಕೊಡಲು

ಆಗುವುದಿಲ್ಲ 2.5 ಕೋಟಿ ಕೊಡುತ್ತೇವೆ ಎಂದು ತಿಳಿಸಿದರು. ನಂತರ ನಾವು ಸದರಿ ಮೊತ್ತಕ್ಕೆ ಒಪ್ಪಿ ನಿವೇಶನ ಮಾರಾಟ ಮಾಡಲು ಒಪ್ಪಿದೆವು. ಅದಕ್ಕೆ 1 ರಿಂದ 3 ನೇ ಆರೋಪಿಗಳು ಸಾಲ ಮಾಡಬೇಕು ನಿವೇಶನದ ದಾಖಲೆಗಳನ್ನು ಕೊಡಿ ಎಂದು ಕೇಳಿ ಪಡೆದುಕೊಂಡರು. ಆರೋಪಿಗಳು ಸಾಲ ಪಡೆಯಲು ಚಾ.ಸಾ.1 ಮತ್ತು 4 ನೇ ಆರೋಪಿಯ ಹೆಸರಿನಲ್ಲಿ ಜಂಟಿ ಖಾತೆ ಮಾಡಿಸಬೇಕು ಎಂಬ ಷರತ್ತನ್ನು ಮಾಡಿದ್ದರು. ಅದರಂತೆ ಇಂಡಿಯನ್ ಬ್ಯಾಂಕ್ ರಾಜಾಜಿನಗರ ಶಾಖೆಯಲ್ಲಿ ಆರೋಪಿಗಳು ಚಾ.ಸಾ.1 ರವರ ಹೆಸರಿನಲ್ಲಿ ಖಾತೆ ತೆರೆಸಿ ಪಾಸ್ ಬುಕ್ ಮತ್ತು ಚೆಕ್ ಬುಕ್‌ನ್ನು ಕೊಟ್ಟಿದ್ದರು, ಆದರೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ.

ಇದಾದ 3-4 ತಿಂಗಳ ನಂತರ ಚಾ.ಸಾ.1 ಮತ್ತು 4 ನೇ ಆರೋಪಿಯ ಹೆಸರಿನಲ್ಲಿ ಜಂಟಿ ಖಾತೆ ಮಾಡಿಸಬೇಕು ಎಂದು ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಕರೆದಿದ್ದರು. ಕರೆ ಮಾಡುವ 3-4 ದಿನಗಳ ಹಿಂದೆ 3 ನೇ ಆರೋೀಪಿ ಕರೆ ಮಾಡಿ ಜಂಟಿ ಖಾತೆ ಮಾಡಿಸಬೇಕು ಎಂದು ಹೇಳಿದರು ಅದಕ್ಕೆ ನಾನು ಒಪ್ಪದೇ ಇದ್ದ ಕಾರಣ ಮನೆಗೆ ಬಂದು ನೋಡಿಕೊಳ್ಳಬೇಕಾಗುತ್ತದೆ ಎಂದು ಧಮಕಿ ಹಾಕಿದ್ದರು. ದಿ:28.03.2018 ರಂದು ಮಲ್ಲೇಶ್ವರಂ 8 ನೇ ಕ್ರಾಸ್‌ನಲ್ಲಿ ಇರುವ ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಹೋಗಿ ಚಾ.ಸಾ.1 ಮತ್ತು 4 ನೇ ಆರೋಪಿಯ ಹೆಸರಿನಲ್ಲಿ ಜಂಟಿ ಖಾತೆ ತೆರಿಸಿ ರೂ.10000/-ಗಳನ್ನು ಜಮಾ ಮಾಡಿ ಚಾ.ಸಾ.1 ರವರ ಆಧಾರ್ ಕಾರ್ಡ, ಪ್ಯಾನ್ ಕಾರ್ಡ ಮತ್ತು ಫೋಟೋಗಳನ್ನು ಪಡೆದಿದ್ದರು. ಖಾತೆ ತೆರಿಸಿದ ನಂತರ ಚಾ.ಸಾ.1 ರವರಿಗೆ ಪಾಸ್ ಬುಕ್ ಮತ್ತು ಚೆಕ್ ಬುಕ್‌ನ್ನು ನೀಡಿದರು. ನಂತರ ಆರೋಪಿಗಳು ನಮ್ಮನ್ನು ಒಂದು ಹೋಟೆಲ್‌ಗೆ ಕರೆಸಿ ಅಲ್ಲಿ ನಿಮಗೆ ರೂ.83 ಲಕ್ಷ

ಜಮಾ ಮಾಡುತ್ತೇವೆ ಅದಕ್ಕಾಗಿ ಚೆಕ್ಕಗಳು ಬೇಕು ಎಂದು ಚೆಕ್ ಬುಕ್‌ನಲ್ಲಿ ಇರುವ ಎಲ್ಲಾ ಖಾಲಿ ಚೆಕ್ಕುಗಳಿಗೆ ಚಾ.ಸಾ.1 ರವರ ಸಹಿ ಪಡೆದುಕೊಂಡರು.

ದಿಃ31.03.2018 ರಂದು ಕ್ರಯಪತ್ರದ ನೊಂದಣಿಗೆ ಎಂದು ಗಾಂಧಿನಗರದ ಉಪನೊಂದಣಾಧಿಕಾರಿಯ ಕಛೇರಿ ಕರೆದಿದ್ದರು. ಅಲ್ಲಿ 1 ರಿಂದ 4 ನೇ ಆರೋಪಿಗಳು, ಬ್ಯಾಂಕಿನ ಅಧಿಕಾರಿ ಮತ್ತು ಕೇಶಮೂರ್ತಿಯವರು ಇದ್ದರು. ನಂತರ ಕ್ರಯಪತ್ರ ತಯಾರಾಗಿದ್ದು ಅದರಲ್ಲಿ ರೂ.3 ಕೋಟಿ 36 ಲಕ್ಷಕ್ಕೆ ಕ್ರಯವಾದ ಬಗ್ಗೆ ನಮೂದಿಸಿದ್ದನ್ನು ನೋಡಿದೆ. ನಂತರ ಕ್ರಯಪತ್ರ ನೊಂದಿಣಿಯಾಯಿತು. ಅದೇ ವೇಳೆಗೆ ಚಾ.ಸಾ.1 ರವರ ಮೊಬೈಲಿಗೆ ಮೆಸೇಜ್ ಬಂದಿದ್ದು ರೂ5000/-ವನ್ನು ಹೊರತುಪಡಿಸಿ ಉಳಿದ ಎಲ್ಲಾ ಹಣವೂ ತೆಗೆಯಲಾಗಿದೆ ಎಂದಿತ್ತು. ಅದನ್ನು ಪ್ರಶ್ನಿಸಿದ್ದನ್ನು ಆರೋಪಿಗಳು ಅವರ ಕಛೇರಿಗೆ ಹೋಗಿ ರೂ.25 ಲಕ್ಷಕ್ಕೆ ಚೆಕ್ಕನ್ನು ಬರೆದುಕೊಟ್ಟರು. ಆರೊಪಿಗಳು ಕೊಟ್ಟ ಚೆಕ್ಕನ್ನು ನಗದೀಕರಣಕ್ಕೆ ಹಾಕಿದ್ದು ಹಣ ಇಲ್ಲ ಎಂದು ವಾಪಸ್ಸು ಆಗಿತ್ತು.

ಇದಾದ ಸುಮಾರು 1 ತಿಂಗಳ ಕಾಲ ಆರೋಪಿಗಳ ಕಛೇರಿ ಹಣ ಪಡೆಯಲು ಅಲೆದಾಡಿದ್ದು ಅದಕ್ಕೆ ಆರೋಪಿಗಳು 4 ನೇ ಆರೋಪಿಯ ಹೆಸರಿನಲ್ಲಿ ಇದ್ದ 7-8 ಚೆಕ್ಕುಗಳನ್ನು ಒಟ್ಟು ರೂ.1 ಕೊಟಿ 25 ಲಕ್ಷಕ್ಕೆ ನೀಡಿದರು. ನಂತರ ಬ್ಯಾಂಕಿಗೆ ಹೋಗಿ 4 ನೇ ಆರೋಪಿಯ ಖಾತೆಯ ಬಗ್ಗೆ ವಿಚಾರಿಸಿದಾಗ ಸದರಿ ಖಾತೆಯಲ್ಲಿ ಅಷ್ಟು ಮೊತ್ತದ ಹಣ ಇಲ್ಲ ಎಂದು ತಿಳಿಸಿದರು. ನಂತರ ನಾನು ಆರೋಪಿಗಳ ಕಛೇರಿ ಹೋಗಿ ಕೇಳಲಾಗಿ ಸದರಿ ಚೆಕ್ಕುಗಳನ್ನು ವಾಪಸ್ಸು ಪಡೆದು 1 ನೇ ಆರೋಪಿಯ ಹೆಸರಿನಲ್ಲಿ ಇದ್ದ 3 ಚೆಕ್ಕುಗಳನ್ನು ಒಟ್ಟು ರೂ.2 ಕೋಟಿಗೆ ನೀಡಿದರು. ನಂತರ ಸದರಿ ಚೆಕ್ಕುಗಳಿಗೆ

ಸಂಬಂದಿಸಿದ ಖಾತೆಯಲ್ಲಿ ಅಷ್ಟು ಹಣ ಇಲ್ಲದೇ ಇರುವುದು ಕಂಡಬಂದು ಚೆಕ್ಕುಗಳು ಸಹ ಅಮಾನ್ಯಗೊಂಡು ವಾಪಸ್ಸು ಬಂದಿದ್ದವವು. ಅದಕ್ಕೆ ಸಂಬಂದಿಸಿದಂತೆ ಕ್ರಮ ತೆಗೆದಕೊಂಡು ಖಾಸಗಿ ದೂರನ್ನು ಸಲ್ಲಸಿದೆವು. ಪ್ರಕರಣಗಳು ಮುಕ್ತಾಯಗೊಂಡಿದ್ದು 1 ನೇ ಆರೋಪಿಗೆ ಶಿಕ್ಷೆಯಾಯಿತು. ಸದರಿ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಿಸಿಹೆಚ್-68 ರಲ್ಲಿ ದಾಖಲಿಸಿದ್ದು ಅದು ಇನ್ನು ಬಾಕಿ ಇದೆ.

ಹಣ ವಸೂಲಾತಿಗಾಗಿ ಅಸಲು ದಾವೆ ಸಂ.4832/2019 ರಂತೆ ದಾಖಲಿಸಿದ್ದು ಸದರಿ ದಾಖಲೆ ನಿ.ಪಿ.3 ಎಂದು ಗುರುತಿಸಲಾಗಿದೆ. ಅದು ಸಹ ಈಗ ಮೇಲ್ಮನವಿ ಇತ್ಯರ್ಥಕ್ಕೆ ಬಾಕಿ ಇದೆ. ಈಗ ಬರಬೇಕಾದ ಪ್ರತಿಫಲವನ್ನು ಆರೋಪಿಗಳು ಕೊಟ್ಟಿದ್ದು ಇಲ್ಲ ಮತ್ತು ಸ್ವತ್ತು ಸಹ ಅಮಲ್‌ಜಾರಿಯಲ್ಲಿ ಮಾರಾಟವಾಗಿದೆ ಎಂದು ತಿಳಿದುಕೊಂಡಿದ್ದೇನೆ. ಆರೋಪಿಗಳನ್ನು ಪ್ರತಿಫಲ ಕೊಡುವಂತೆ ಕೇಳಲು ಹೋದಾಗ ನನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ಚಾ.ಸಾ.1 ರವರು ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ.

ಸಾಕ್ಷಿಯು ಈಗ ಚಾ.ಸಾ.1 ರವರಿಗೆ ಮಾಡಿಕೊಟ್ಟ ದಾನಪತ್ರದ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.12 ಎಂದು ಗುರುತಿಸಲಾಯಿತು. ಸಾಕ್ಷಿಯು ಈಗ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ</u>**

ಆರೋಪಿಗಳ ಪರ ವಕೀಲರು ಗೈರುಹಾಜರು ಇದ್ದು 2 ಮತ್ತು 4 ನೇ ಆರೋಪಿಗಳು ಹಾಜರು ಇದ್ದು ಸಮಯ ಕೋರುತ್ತಾರೆ. ಯಾವುದೇ ಸಕಾರಣ

ನೀಡಿರುವುದಿಲ್ಲ ಆದ್ದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**